ಸಿಸಿ ನಂ. **354/2019,** ಪಿ.**ಡಬ್ಲ್ಯೂ:1**

**ದಿನಾಂಕ:19-08-2025** ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:

ನಾನು ಬೆಂಗಳೂರಿಗೆ ಗಾರೆ ಕೆಲಸಕ್ಕೆ ಹೋಗಿದ್ದೇನು. ಗಾರೆ ಕೆಲಸಕ್ಕೆ ನಮ್ಮ ಒಬ್ಬ ಮೇಸ್ತ್ರಿ ಇರುತ್ತಾರೆ ಎಂದರೆ ಸರಿ. ಸದರಿ ಮೇಸ್ತ್ರಿ ರವರೇ ನಮ್ಮನ್ನು ಊರ ಕಡೆ ಕಳುಹಿಸುತ್ತಾರೆ ಎಂದರೆ ಸರಿ. ನಾವು ಊರಿಗೆ ಬರುವುದಕ್ಕೆ ವಾಹನದ ವ್ಯವಸ್ಥೆಯನ್ನು ಮೆಸ್ತ್ರಿಯವರು ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ದಿ:01-08-2018 ರಲ್ಲಿ ಬೆಂಗಳೂರಿಗೆ ಮೆಸ್ತ್ರಿ ಕೆಲಸಕ್ಕೆ ಹೋಗಿದ್ದೇನು. ಅಲ್ಲಿ ನಾನು ಒಂದು ತಿಂಗಳು ಕೆಲಸ ಮಾಡಿರುತ್ತೇನೆ. ನಾನು ದಿ: 15-09-2018 ರಂದು ಮರಳಿ ನಾನು ನನ್ನ ಊರಿಗೆ ಬರುತ್ತಿದ್ದೆ. ನಾನು ಬೆಂಗಳೂರಿನಲ್ಲಿ 1 ತಿಂಗಳು 15 ದಿನ ಕೆಲಸ ಮಾಡಿದ ಬಗ್ಗೆ ಪೋಲಿಸರು ಕೇಳಿರುವುದಿಲ್ಲ. ನನ್ನ ಕೆಲಸದ ಹಾಜರಾತಿ ವಿವರಣೆ ನನ್ನ ಮೆಸ್ತ್ರಿ ಬಳಿ ಇದೆ. ನಾನು ಬೆಂಗಳೂರಿನಲ್ಲಿ 1 ತಿಂಗಳು ಕೆಲಸ ಮಾಡಿರುತ್ತೇನೆ ಎಂದರೆ ಸಾಕ್ಷಿಯು 1 ತಿಂಗಳು 15 ದಿನ ಕೆಲಸ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ ಕೆಲಸ ಮಾಡಿರುತ್ತೇನೆ. ನಾನು ಕೆಲಸದ ವಾಸಕ್ಕೆ ಅಲ್ಲಿಯೇ ಬೆಂಗಳೂರಿನಲ್ಲಿ ಉಳಿದುಕೊಂಡಿದ್ದೆ. ನಾನು ಮಹೋರಾಂ ಹಬ್ಬದ ನಿಮಿತ್ತ ಊರಿಗೆ ಬರುತ್ತಿದ್ದೆ. ನಾನು ಬೊಮ್ಮನಳ್ಳಿಯಿಂದ ಮೆಜಸ್ಟಿಕ್ ಗೆ ಬಂದು ಅಲ್ಲಿಂದ ಕೊಪ್ಪಳ ಬಸ್ ನಲ್ಲಿ ಬಂದಿರುತ್ತೇನೆ. ನಾನು ಬೊಮ್ಮನಳ್ಳಿ ಬಿಟ್ಟಾಗ ರಾತ್ರಿ 08.00 ಗಂಟೆಗೆ ಬಂದಿರುತ್ತೇನೆ. ನಾನು 08.30 ಕ್ಕೆ ಬಿ ಎಂ ಟಿ ಸಿ ಬಸ್ ನಿಲ್ದಾಣಕ್ಕೆ ಬಂದು ನಂತರ ಮೆಜಸ್ಟಿಕ್ ಬಸ್ ನಿಲ್ದಾಣಕ್ಕೆ ಬಂದು ನಂತರ ಕೊಪ್ಪಳಕ್ಕೆ ಬರುವ ಬಸ್ ಗೆ ಬಂದಿರುತ್ತೇನೆ. ಸದರಿ ಬಸ್ ರಾತ್ರಿ 11.00 ಗಂಟೆಗೆ ಬಿಟ್ಟಿರುತ್ತದೆ. ನಾನು ಸದರಿ ಬಸ್ ನ್ನುಹತ್ತುವ ಸಮಯದೇಲ್ಲಿ ಚಾಲಕನ ಹೆಸರ, ನಿರ್ವಾಹಕನ ಹೆಸರು ಮತ್ತು ಬಸ್ ಸಂಖ್ಯೆ ಇರಲಿಲ್ಲ ಎಂದರೆ ಸರಿ. ಬಸ್ ನಲ್ಲಿ ಸಾಕಷ್ಟು ಜನ ಇದ್ದರು ಎಂದರೆ ಸರಿ. ನಾನು ಸದರಿ ಬಸ್ ನಲ್ಲಿ ಪ್ರಯಾಣಿಸಲು ರಿರ್ಜವೇಷನ್ ಮಾಡಿಸಿಲ್ಲ, ಟೀಕೆಟ್ ತೆಗೆಸಿದ್ದೆ, ಸದರಿ ಬಸ್ ನ ಟಿಕೆಟ್ ನ್ನು ನನ್ನ ಬಳಿ ಪೋಲಿಸರು ಕೇಳಿ ತೆಗೆದುಕೊಂಡಿರುತ್ತಾರೆ. ಚಾಸಾ 4, 5 ರವರುಗಳು ನನಗೆ ವೈಯಕ್ತಿಕವಾಗಿ ಪರಿಚಯ ಇರುವುದಿಲ್ಲ. ಬೆ. 06.30 ಕ್ಕೆ ಅಪಘಾತವಾಗಿರುತ್ತದೆ. ನಾನು ಅಪಘಾತವಾದ ದಿನದಂದು ಯಾವುದೇ ಕಾರಣಕ್ಕೂ ನಾನು ಅ ಬಸ್ ನಲ್ಲಿ ಚಲಾಯಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ದೂರನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆದರೇ ಪೋಲಿಸನವರು ಬರೆದುಕೊಂಡಿರುತ್ತಾರೆ. ದೂರಿಗೆ ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎ ಂದರೆ ಸರಿ ನಾನು ದೂರಿನ ಸರಾಂಶವನ್ನುಹೇಳಿ ಬರೆಸಿರುತ್ತೇನೆ. ನಾನು ಅಪಘಾತವಾದಗ 10 ನಿಮಿಷ ಇದ್ದು ನಂತರ ಅಂಬುಲೆನ್ಸ ಮೂಲಕ ಜಿಲ್ಲಾ ಆಸ್ಪತ್ರೆಗೆ ಬಂದಿರುತ್ತೇನೆ. ಘಟನ ಸ್ಥಳದಲ್ಲ ನಾನು ಎಷ್ಟು ಸಹಿ ಮಾಡಿರುತ್ತೇನೆ ಎಂದು ನೆನಪು ಇಲ್ಲ. ಸದರಿ ದಿನದಂದು ಬಸ್ ನಲ್ಲಿ ಪ್ರಯಾಣಿಸಿರುವುದಿಲ್ಲ ಈ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಸ್ ನ ಚಾಲಕನಿಗೆ 15 ವರ್ಷಗಳ ಅನುಭವ ಇದ್ದು ಅವರು ತನ್ನವಾಹನವನ್ನು ನಿರ್ಲಕ್ಷತನದಿಂದ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಈ ಘಟನೆಗೂ ಮತ್ತು ಅರೋಪಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ. ಜೆ ಎಂ ಎಫ್ ಸಿ ಕೊಪ್ಪಳ.